IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಮಹಿಳಾ ಸಂವೇದನೆ

**ಶ್ವೇತಾ. ಎಂ**
**ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ವಿ.ವಿ.ಎಸ್.ಎಫ್.ಜಿ.ಸಿ**
**ಸಂಶೋಧನಾರ್ಥಿ**
**ಕನ್ನಡ ಸಂಶೋಧನಾ ವಿಭಾಗ**
**ಜೈನ್ ಡೀಮ್ಡ್‌ಟು – ಬಿ ವಿಶ್ವವಿದ್ಯಾಲಯ**
**ಬೆಂಗಳೂರು.**

## ಪೀಠಿಕೆ :

ಮನುಷ್ಯ ಭೂಮಿ ಮೇಲೆ ಜನಿಸಿದಂದಿನಿಂದ ಕುತೂಹಲ ಅವನ ಬೆಂಬತ್ತಿ ಅವನು ಹೊಸ ಶೋಧನೆಗೆ ಮುನ್ನುಗ್ಗಲು ದಾರಿ ಮಾಡಿಕೊಟ್ಟಿತು. ಅದರ ಮೂಲ ಎಂದರೆ 'ಅರಿವು', 'ತಿಳುವಳಿಕೆ' ಆ ಮೂಲಕ ಎಲ್ಲದರ ಬಗ್ಗೆ ಅವನ ಆಸಕ್ತಿ ಹೆಚ್ಚಿ, ಯೋಚನೆ ಮಾಡಿ ಜ್ಞಾನ ಪಡೆದು ಅತೀ ಪ್ರಜ್ಞಾವಂತನಾಗುವಲ್ಲಿ ಹಿಂದೆ ಬಿದ್ದಿಲ್ಲ. ಏಕೆ ಈ ಪ್ರಶ್ನೆ ಬಂತೆಂದರೆ, ಮನುಷ್ಯ ಸಂಘಜೀವಿ ಸಮಾಜ ಜೀವಿ ಎಂದಾಗ ಅವನು ಸುತ್ತಮುತ್ತಲು ಪರಿಸರ, ಜನಗಳು, ವಸ್ತು, ಆಸ್ತಿಪಾಸ್ತಿ, ಎಲ್ಲವೂ ಅವನಿಗೆ ಅರಿವಿಲ್ಲದಂತೆಯೇ ಅದರ ಬಗ್ಗೆ ಕಿಂಚಿತ್ತು ಕಾಳಜಿ ವಹಿಸುವತ್ತ, ಅತೀ ತಿಳಿಯುವತ್ತ ಗಮನಹರಿಸುವ ಪ್ರಯತ್ನ ಮಾಡುತ್ತಾನೆ ಅದು ವ್ಯಕ್ತಿ, ವಸ್ತು, ಸ್ತ್ರೀ, ಪುರುಷ ಎಂಬಂತಿಲ್ಲ. ಎಲ್ಲವೂ ಅವನಿಗೆ ಕುತೂಹಲವೇ ಸರಿ!

'ಸಂವೇದನೆ' – ಈ ಪರಿಕಲ್ಪನೆಯ ಅರ್ಥವ್ಯಾಪ್ತಿ ವಿಸ್ತಾರವಾದುದು. ಇಂದಿನ ಆಧುನಿಕ ಯುಗದಲ್ಲಿ ಸಂವೇದನೆ ಎಂಬ ಪದವನ್ನು ಅವಿರವಾಗಿ ಮಹಿಳಾಪರ ಚಿಂತನೆಗಳ ಹೋರಾಟಗಳ ಪ್ರತಿಭಟನೆಯ ಫಲಾಕೃತಿಯಾಗಿ ಬಳಕೆ ಮಾಡಲಾಗುತ್ತಿದೆ. ಈ ಹಿನ್ನಲೆಯಲ್ಲಿಯೆ ಆದಿಮ ಸಾಹಿತ್ಯದಿಂದ ನವ ಸಾಹಿತ್ಯ ಕೃಷಿಯಲ್ಲಿಯೂ ಮಹಿಳಾ ಸಂವೇದನೆ ಸಾಹಿತ್ಯದ ಪ್ರಧಾನ ವಿಚಾರೊಕ್ತಿಗಳಲ್ಲಿ ಒಂದಾಗಿದೆ.

ಅರಿವು ಎಂದರೆ ತಿಳುವಳಿಕೆ, ಅನಿಸಿಕೆ, ಅನುಭವ, ಎಂದರ್ಥ ಅಲ್ಲಿಗೆ ಅವನು ತನ್ನ ಸಂವೇದನಾ ಪೂರ್ವಕವಾಗಿ ಒಬ್ಬರ ಬಗ್ಗೆ ತಿಳಿಯುವಿಕೆಯು, 'ಸ್ತ್ರೀ'ಪರ ಸಂವೇದನೆಯು ಬೇರೆ ವಿಷಯದ ರೀತಿ ಇರುವುದಿಲ್ಲ. ಅವಳ ಬಗ್ಗೆ, ಸಮಾಜವೂ, ಪುರುಷ ಪ್ರಧಾನ ಕುಟುಂಬವೂ, ಅವಳ ಜವಾಬ್ದಾರಿಗಳು, ಕೂಡ ಅವಳು ತನ್ನ ಅಸ್ಮಿತೆಯ ಹುಡುಕಾಟಕ್ಕೆ ಇಂಬು ಕೊಟ್ಟಂತೆ ಮೇಲ್ನೋಟಕ್ಕೆ ಕಂಡರೂ ಅದು 'ಆಳದಲ್ಲಿ' ಒಳನೋಟದಲ್ಲಿ, ಅದಕ್ಕೆ ಉತ್ತರ 'ಇಲ್ಲ' ಎಂದರ್ಥವೇ ಸರಿ.

'ಮಹಿಳಾ ಸಂವೇದನೆ' ಎಂದರೆ ಪುರುಷನಿಗೆ ಸಮಾನವಾಗಿ ಸವಾಲುಗಳನ್ನು, ವಿಚಾರಗಳನ್ನು ರೂಪಿಸುವಿಕೆಯಲ್ಲ. ಅದು ನಮ್ಮ ಉಸಿರಾಟದಂತೆ ನಿತ್ಯದ ಅನುಭವಗಳಿಂದಲೇ ಆಗಿದೆ. ಅನುದಿನದ ಅಂತರಗಂಗೆ – ಪ್ರತಿಭಾ ನಂದಕುಮಾರ್ – ಇವರು ಬರಹದ ಮೂಲದ್ರವ್ಯವಾಗಿ ಬಳಸಿದ್ದಾರೆ – ಅಡುಗೆಯ ಪರಿಕರಗಳನ್ನು ಬಳಸಿ ಶಕ್ತಿಶಾಲಿಯಾದ ಅಭಿವ್ಯಕ್ತಿ ರೂಪಕಗಳನ್ನು ಈ ನುಡಿಗಟ್ಟಿನಲ್ಲಿ ಬಳಸುತ್ತಾ ಹೇಳುತ್ತಾರೆ. ಅಂತೆಯೇ ಅನುಭವವು ಅಡುಗೆ ಮನೆಯದ್ದೇ ಆದರೂ ಅದರ ಶೋಧನೆಯ ದಿಕ್ಕು, ದೆಸೆಗಳಲ್ಲಿ ಗಂಭೀರವಾದವು. ಸುನಂದಾ ಪ್ರಕಾಶ್ ಕಡಮೆ ಯವರ ಕತೆಯೊಂದರ ಹೆಸರೇ 'ಕಿಚನ್ ಪ್ಯಾರಡೈಸ್' ಎಂದಾಗಿದೆ. ಅಲ್ಲಿ ದೊಡ್ಡ ದೊಡ್ಡ ಅನುಭವಗಳನ್ನು ಬಡಿದೆಬ್ಬಿಸುವುದು ಅಡುಗೆಯ ಪರಿಕರಗಳೇ ಅನುಭವಗಳೆಂದರೆ ಹಿಮಾಲಯ ಹುಡುಕಿಕೊಂಡು ಹೊಸ ಅದನ್ನು ಹತ್ತುವುದುದಿಂದಲ್ಲ ಅವು ನಮ್ಮ ಸುತ್ತಲೇ ಸಿಗುವಂತಹವು ಅವುಗಳೇ ಸತತ ಸಾತತ್ಯದಿಂದ ಆಗುವಿಕೆಯಿಂದ ವಿಶಿಷ್ಟತೆ ಸಾಧ್ಯವಾಗುತ್ತದೆ.

## ವಿವರಣೆ :

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಯು ಭಿನ್ನ ನೆಲೆಗಳಲ್ಲಿ ಬೆಳೆದು ಬಂದಿದೆ. ಮಹಿಳಾ ಮೀಮಾಂಸೆಗಳ ಬಗೆಗಿನ ಚಿಂತನ–ಮಂಥನಗಳನ್ನು ಕೇವಲ ಕಾಲಘಟ್ಟಗಳಿಗೆ ಸೀಮಿತಗೊಳಿಸಿ ಇದಮಿತ್ಥಂ ಎಂದೆನಲು ಸಾಧ್ಯವಾಗದು. ಅದಾಗ್ಯೂ ಆಧುನಿಕ ಸಾಹಿತ್ಯದ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ ಈ ನಾಲ್ಕು ಕಾಲಘಟ್ಟಗಳ ಸಂದರ್ಭದಲ್ಲಿ ಮಹಿಳೆಯನ್ನು ಪಿತೃಪ್ರಭುತ್ವ, ಸಂಪ್ರದಾಯ, ಧರ್ಮ, ಸಂಬಂಧ, ಕೌಟುಂಬಿಕತೆ, ಲೈಂಗಿಕತೆ, ಜಮಿನ್ದಾರಿ ವ್ಯವಸ್ಥೆಯ ಕ್ರೌರ್ಯ, ಬಂಡವಾಳಶಾಹಿ ವ್ಯವಸ್ಥೆ, ಬಡತನ, ಅಸಹಾಯಕತೆ, ಜಾತಿಸಂಕರಗಳ ಏಣಿ–ಶ್ರೇಣಿ ವ್ಯವಸ್ಥೆಯೊಳಗೆ ರೂಪಿಸಿಕೊಂಡಿರುವ ಸಂಗತಿಗಳೊಂದಿಗೆ 'ಮಹಿಳಾ ಸಂವೇದನೆ' ಮುಖಾಮುಖಿಯಾಗಿರುವುದು ಗಮನಾರ್ಹ.

ನವೋದಯ ಸಂದರ್ಭದಲ್ಲಿ 'ಮಹಿಳಾ ಸಂವೇದನೆ' ಆದರ್ಶ ಸ್ತ್ರೀ ಪರಿಕಲ್ಪನೆಯೊಂದಿಗೆ ಬೆಳೆದುಬಂದಿದೆ. ಜೊತೆಗೆ ಸಾಂಪ್ರದಾಯಿಕ ಆಚರಣೆ, ವೈದವ್ಯ, ಕೇಶಮಂಡನ, ಬಾಲ್ಯವಿವಾಹ, ವಿಧವಾವಿವಾಹ ಇವೇ ಮೊದಲಾದ ಸಂಗತಿಗಳಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಮಹಿಳಾಪರ ಚಿಂತನೆ ಕಂಡುಬಂದಿದೆ. ಜೊತೆಗೆ ವ್ಯವಸ್ಥೆಯ ಒಳಗಿದ್ದು ವ್ಯವಸ್ಥೆಯನ್ನು ಸರಿಪಡಿಸುವ ಕೆಲಪ್ರಯತ್ನಗಳು ಕಂಡುಬಂದಿದೆ. ಇದಕ್ಕೆ ಇಂಬು ಕೊಡುವಂತೆ ಸ್ತ್ರೀ ಶಿಕ್ಷಣವೆಂಬ ಅಸ್ತ್ರವನ್ನು ಬಳಸಿದರು ಕೂಡ ಸಂಪ್ರದಾಯಸ್ತ ಮನಸ್ಥಿತಿಗಳನ್ನು ಪೂರ್ಣಪ್ರಮಾಣದಲ್ಲಿ ಬದಲಿಸಲು ಸಾಧ್ಯವಾಗದಿರುವುದು ಕೂಡ ಒಂದು ಸಂಗತಿ.

ಪ್ರಗತಿಶೀಲ ಸಾಹಿತ್ಯ ಸಂದರ್ಭದಲ್ಲಿ ಮಹಿಳೆಯರ ಕೌಟುಂಬಿಕ ಬದುಕಿನ ಚಿತ್ರಣಗಳೊಂದಿಗೆ ಶೋಷಿತ, ಧಮನಿತ ಅದರಲ್ಲೂ ಅಲಕ್ಷಿತರಂತೆ ಬದುಕನ್ನು ನಡೆಸಿದ ಮಹಿಳೆಯರ ವಿಷಯಗಳು ಸಾಹಿತ್ಯಾಭಿವ್ಯಕ್ತಿಯ ಮೂಲಕ ಸಮಾಜದ ಜನರ ಕಣ್ಣು ತೆರೆಸುವಲ್ಲಿ ಕಾರಣವಾದವು. ನಿರಂಜನ ಅವರ ಕೊಎನೆಯ ಗಿರಾಕಿ ಇದಕ್ಕೆ ಉತ್ತಮ ನಿದರ್ಶನವಾಗಿದೆ. ಜೊತೆಗೆ ಅ.ನ.ಕೃ, ತ.ರಾ.ಸು, ಬಸವರಾಜು ಕಟ್ಟಿಮನಿ ರವರ ಕಥೆಗಳು ಮಹಿಳೆಯರ ಶೋಷಣೆಯ ಭಿನ್ನ ನೆಲೆಗಳನ್ನು ಪ್ರತಿಬಿಂಬಿಸುವಲ್ಲಿ ಕಾರಣವಾದವು. ಇದರೊಂದಿಗೆ ಪ್ರಗತಿಶೀಲರ ಸೈದ್ಧಾಂತಿಕತೆಯು ಮಹಿಳೆಯರ ಸಂವೇದನೆಯ ಭಾಗವಾಗಿ ಬೆಳೆದುಬಂದಿದ್ದು ವಿಶೇಷವಾಗಿದೆ.

ನವ್ಯ ಸಾಹಿತ್ಯ ಶೀಲ–ಅಶ್ಲೀಲಗಳೆನ್ನದೆ ಮಣ್ಣಿನ ಸೊಗಡಿನ ಮೂಲಕ ಈ ಮಣ್ಣಿನ ಹೆಣ್ಣುಮಗಳ ಮಾನಸಿಕ ತೊಳಲಾಟಗಳನ್ನು ನಗರದ ಮಧ್ಯಮವರ್ಗದ ಸ್ತ್ರೀಯರ ಸೆಣಸಾಟಗಳನ್ನು, ಅಸ್ತಿತ್ವವನ್ನು, ಹೋರಾಟಗಳನ್ನು ಅಸಂಗತ ಮತ್ತು ಅಸ್ಥಿತ್ವವಾದಗಳ ಹಿನ್ನಲೆಯಲ್ಲಿ ಕಟ್ಟಿಕೊಟ್ಟಿದೆ. ಅದರಲ್ಲಿಯು ಸಾಂಪ್ರದಾಯಿಕ ಮನೋಧೋರಣೆಯಿಂದ ವೈಚಾರಿಕತೆಯತ್ತ ಮಹಿಳೆಯರನ್ನು ಬದಲಿಸುವ ಕಾರ್ಯಮಾಡಿದೆ. ಯು.ಆರ್.ಅನಂತಮೂರ್ತಿ, ಲಂಕೇಶ್, ತೇಜಸ್ವಿಯಂತಹ ಬರಹಗಾರರು ಮಹಿಳೆಯರನ್ನು ತಾವಿರುವ ಸ್ಥಿತ್ಯಂತರಗಳನ್ನು ಒಳಗೊಂಡಂತೆ ಅದರಿಂದ ಹೊರಬರುವ ಮನೋಚ ಮಾರ್ಗಗಳೊಂದಿಗೆ ಈ ಸಮಾಜವನ್ನು ಎದುರುಗೊಂಡಿರುವುದು ಮುಖ್ಯವಾದ ಸಂಗತಿಯಾಗಿದೆ.

ದಲಿತ ಬಂಡಾಯ ಸಂದರ್ಭದಲ್ಲಿ ಮಹಿಳಾ ಸಂವೇದನೆ ಎಂಬುದು ಹೊಸ ಎಚ್ಚರ ಮತ್ತು ಗಾಂಭೀರ ಚಿಂತನೆಗಳೊಂದಿಗೆ ಬೆಳೆದುಬಂದಿವೆ. ಮಹಿಳೆಯರ ಸಾಮಾಜಿಕ, ಔದ್ಯೋಗಿಕ, ಕೌಟುಂಬಿಕ, ಜಾತಿಸಂಕರ, ಜಮಿನ್ದಾರ ಪದ್ಧತಿ, ಉಚ್ಚ–ನೀಚ – ಇವುಗಳ ಹೆಸರಿನಲ್ಲಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸಿಸಿರುವುದರೊಂದಿಗೆ ಶೋಷಣೆಯ ಅನ್ಯಾಯಗಳ ಮೂಲಕ ಸಮಯದ ಗೊಂಬೆಗಳಂತೆ ಮಾಡಿಕೊಂಡಿರುವ ವ್ಯವಸ್ಥೆಯನ್ನು ಖಂಡಿಸಿರುವ ಮೂಲಕ ಸಾಮಾಜಿಕ ಎಚ್ಚರ ಮತ್ತು ಕಾನೂನಾತ್ಮಕ ಅರಿವನ್ನು ಮೂಡಿಸುವ ಕಾರ್ಯಮಾಡಿದೆ. ಜೊತೆಗೆ ಹೆಣ್ಣಿನ ದೇಹಮೀಮಾಂಸೆಯೊಂದಿಗೆ ಆಕೆಯ ದೈಹಿಕ ಮತ್ತು ಮಾನಸಿಕ ಅನನ್ಯತೆ ಹಾಗೂ ಜೈವಿಕ ಜವಾಬ್ದಾರಿಗಳ ಬಗ್ಗೆ ಸೂಕ್ಷ್ಮವಾಗಿ ಧ್ವನಿಸಿರುವುದು ಕಂಡುಬಂದಿದೆ.

ಒಂದು ವಿಷಯಕ್ಕೆ ಹಲವಾರು ಆಯಾಮಗಳಿರುತ್ತವೆ. ಗ್ರಹಿಕೆಗೆ ಸಿಗದ ಹೆಣ್ಣಿನ ಕೌಟುಂಬಿಕ ವ್ಯವಸ್ಥೆ ನಮ್ಮದಾಗಿದೆ. ಶೈಶವಾವಸ್ಥೆಯಿಂದಲೇ ಹೆಣ್ಣಿಗೆ ಸಂಬಂಧಿಸಿದ ಉಡುಗೆ ತೊಡುಗೆ, ಆಟದ ಸಾಮಾನುಗಳು, ಆಚಾರ ವಿಚಾರಗಳ ಮೂಲಕ ಅವಳ ಮನಸ್ಸನ್ನು ಬದಲಾಯಿಸುತ್ತಾರೆ. ಇದು ಯಾರ ಒಳನೋಟಕ್ಕೂ ಬರುವುದಿಲ್ಲ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸಾಮಾಜಿಕ ಮತ್ತು ರಾಜಕೀಯವನ್ನು ಮಹಿಳೆಗೆ ಮುರಿದು ಕಟ್ಟಿದ್ದಾರೆ. ಮಹಿಳಾ ಮನಸ್ಸನ್ನು ಪ್ರಜ್ಞಾಪೂರ್ವಕವಾಗಿಯೇ ಕಟ್ಟಿಹಾಕಿರುತ್ತಾರೆ. ಆದ್ದರಿಂದ ಪುರುಷ ಮತ್ತು ಮಹಿಳೆಯರಿಬ್ಬರೂ ಮಾನಸಿಕವಾಗಿ ಪುನರ್ ನಿರ್ಮಾಣಗೊಳ್ಳಬೇಕು.

ನಮ್ಮ ಸಮಾಜ ಮೂಲಭೂತವಾಗಿ ಗಂಡಿನ ಭಿನ್ನತೆ ಸ್ಥಾಪಿಸುವಂಥದ್ದೇ ಆಗಿದ್ದರಿಂದ ಸಹಜವಾಗಿ ಆತನ ಆಶಯಗಳಿಗೆ ಚಾಲನೆವಾದಗಿಸುವ ಎಲ್ಲ ಪ್ರಯತ್ನಗಳೂ ಸಫಲಗೊಂಡವು ಎಂದರೆ ಅತಿಶಯೋಕ್ತಿಯಾಗಲಾರದು. ಆಗ ಹೆಣ್ಣಿನ ಆಸ್ತಿತ್ವ ಮೂಲೆಗುಂಪಾಯಿತು. ಮಹಿಳೆಯ ವೈಯಕ್ತಿಕ, ಕೌಟುಂಬಿಕ, ಮಿತ್ರ ಸಮೂಹನೆಯ ಮೂರು ತಿಳುವಳಿಕೆ/ಗ್ರಹಿಕೆಗಳು ಪುರುಷೇಚ್ಛೆಯನ್ನು ಆಧಾರಿಸಿ ರಚನೆಯಾಗಿರುವಂತೆ ಕಂಡುಬರುತ್ತದೆ. ಗಂಡು ತನ್ನ ನಿರ್ದೇಶನದಂತೆಯೇ ನಡೆಸಿಕೊಳ್ಳುವಿಕೆಯ ಅಂತಹ ಸ್ಥಿತಿಯಲ್ಲಿ ಸ್ತ್ರೀ ಕೂಡ ಯಾವ ವಿರೋಧ ಇಲ್ಲದೆ ಒಪ್ಪಿಕೊಳ್ಳುವಾಗ ಆರಾಮವಾಗಿ ನಡೆದು ಬಿಡುತ್ತದೆ. ಅದಕ್ಕೆ ಉದಾ: ಎಂದರೆ – ಬಾಲ್ಯದಲ್ಲಿ ತಾಯಿ–ತಂದೆಯರ ಅಡಿಯಲ್ಲಿ, ಯೌವ್ವನದಲ್ಲಿ ಗಂಡನ ನಿಯಂತ್ರಣದಲ್ಲಿ, ಇಳಿವಯಸ್ಸಿನಲ್ಲಿ ಮಕ್ಕಳ ಅಸ್ತಿತ್ವದ ಹಿನ್ನೆಲೆಯಲ್ಲಿ, ತನ್ನನ್ನು ತನ್ನ ಬದುಕನ್ನು ಗುರುತಿಸಿಕೊಳ್ಳುವು. ಬದುಕನ್ನು ತನಗಾಗಿ ರೂಪಿಸಿಕೊಳ್ಳುವುದಕ್ಕಿಂತ ಎರಡೆನೇಯವರಿಂದಾಗಿ ರೂಪಿಸುವಿಕೆ ತನ್ನ ಸ್ಥರದ, ಸ್ಥಾನದ ಮೇಲೆರುವಿಕೆ ಅಸ್ಮಿತೆಗೆ ಯಾವ ಸ್ಥಾನವು ಸಿಗದೆ ಮೇಲೆರೆಂದತೆ ಮಾಡಲ್ಪಟ್ಟಿತು.

ಇದಕ್ಕೆ ಹೊಂದಿಕೊಂಡಂತೆ ಸಾಮಾಜಿಕ ನಿಯಮಗಳು ಕಟ್ಟುಪಾಡುಗಳು ಹೆಣ್ಣಿನ ಸ್ಥಿತಿಯನ್ನು ಗಂಡಿನ ಬದುಕಿನೊಂದಿಗೆ ಜತೆಯಾಗಿರುವಂತೆ ಮಾಡಿದರೆ ಮಾತ್ರವೇ ಅವಳ ಬದುಕು ಸಾರ್ಥಕವಾಗುತ್ತದೆ ಎಂಬ ಪೂರ್ವನಿರ್ಧರಿತ ಧೋರಣೆಯಲ್ಲ ಕೆಲಸ ಮಾಡಿದೆ ಎಂದರೆ ತಪ್ಪಾಗಲಾರದು.

ತನ್ನ ಮೂಲ ನೆಲೆ 'ಸ್ತ್ರೀಪರ' ಚಿಂತನೆಗೆ ಎಡೆ ಮಾಡಿಕೊಳ್ಳುವಲ್ಲಿ ಸ್ತ್ರೀ ಸೋತಿದ್ದಾಳೆ ಎಂಬುದು ಬೇಸರದ ಸಂಗತಿ. ಈ ರೀತಿಯ ಅಸಹಾಯಕತೆ ತನ್ನ ಅಂತರಂಗದ ಅಸ್ಮಿತೆಗೆ – ಧಕ್ಕೆ ತಂದಿದೆ. ತನ್ನ ಅಸ್ತಿತ್ವದ ಪ್ರಶ್ನೆಗೆ ಉತ್ತರ ಕೊಡುವಲ್ಲಿ ಅವಳಿಗೆ ಅನುಕೂಲಗಳಿಗಿಂತ ಅನಾನುಕೂಲಗಳೇ ಹೆಚ್ಚು ಎಲ್ಲರ ನಿಯಂತ್ರಣಗಳಿವೆ ಬಿಡುಗಡೆ ಹೊಂದಬೇಕೆಂಬ ಉತ್ಸಾಹ. ಇದುವರೆಗೆ ನಾನು ಎಂತಹ ರೊಜ್ಜಲ್ಲಿ ಮುಳುಗಿದೆ ಎಂಬುದರ ಅರಿವು ಆಗಬೇಕಿದೆ. ಹೆಣ್ಣು ಕೇವಲ ಲೈಂಗಿಕ ಆಶಯ ತೀರಿಸುವ ರೀತಿಯ ಅನಿವಾರ್ಯತೆಯ ವಸ್ತುವಾಗಿಲ್ಲ. ಇಂದಿನ ಅರಿವಿನ ಸ್ಥರದ ಸ್ಥಿತಿಯಲ್ಲಿ ಹೆಣ್ಣಿನ ಇಚ್ಛೆಯೇ ಪ್ರಧಾನವಾಗುತ್ತದೆ. ಆಕೆಯ ಬದುಕಿನಲ್ಲಿ ಈಗ ಬಿರುಗಾಳಿ ಎದ್ದು ಪ್ರತಿರೋಧದ ನೆಲೆ ಅದು ಅಸ್ಮಿತೆಯ ಪರವಾದ ಪ್ರತಿರೋಧದ ನೆಲೆ ಮನದಲ್ಲುದಯಿಸಿ ಸ್ಥಾನಮಾನದ ವಿಚಾರದಲ್ಲಿ ಗೊಂದಲಗಳಿದ್ದರೆ ಅವಳಿಗೆ ಬೇಸರವೆನಿಸಿದರೆ ಅವಮಾನವಾಯಿತೆಂದರೆ ಅದನ್ನು ಒಪ್ಪಿಕೊಳ್ಳುದೆ ಪುರುಷ ಸಮಾನ ಭೂಮಿಕೆಯಲ್ಲಿಯೂ ಚಲಿಸಲು ತಯಾರಿಗಿದ್ದಾಳೆ ಮಹಿಳೆ ಎಂಬುದು ಸ್ವಾಗತಾರ್ಹ ಸಂತಸದ ಸಂಗತಿ.

ಸಾಹಿತ್ಯವನ್ನು, ಸಂಸ್ಕೃತಿಯನ್ನು ಅನುಸಂಧಾನ ಮಾಡಿಕೊಳ್ಳುವಾಗ ಅವುಗಳನ್ನು ಪುನರ್ ರಚನೆ ಮಾಡಿಕೊಳ್ಳುವ ಸ್ಥಿತಿ ಮಹಿಳಾ ಬರಹಗಾರ್ತಿಯರಿಗೆ ಉಂಟಾಯಿತೆಂದು ಹೇಳಬಹುದಾಗಿದೆ. ಅಲ್ಲಿಂದ ನಾವು ಪ್ರಜ್ಞಾಪೂರ್ವಕ ಮಹಿಳಾ ಸಂವೇದನೆಗಳನ್ನು ಕಾಣಬಹುದಾಗಿದೆ. ಅಲ್ಲಿ ಅವರು ಸ್ಥಿತಿಯ ಅರಿವು ಮತ್ತು ನಂತರದಲ್ಲಿ ಸುಧಾರಣಾವಾದಿ ಪರಿಹಾರ ಕಂಡುಕೊಳ್ಳುವಿಕೆಯ ನೆಲೆಯಲ್ಲಿ ತಿರುಮಲಾಂಬ ಅವರಿಂದ ಹಿಡಿದು ಕೊಡಗಿನ ಗೌರಮ್ಮನವರ ತನಕ ಈ ಸಂವೇದನೆಗಳನ್ನು ಕಾಣಬಹುದಾಗಿದೆ. ಆಗ ಪ್ರಚಲಿತದಲ್ಲಿದ್ದ ಚಳುವಳಿಗಳು, ಸುಧಾರಣಾ ನೀತಿಗಳು, ಏನಾದರೂ ವಸಾಹತುಷಾಹಿ ತಂದುಕೊಟ್ಟ ಇನ್ನಷ್ಟು ಇಂಗ್ಲೀಷ್ ವಿದ್ಯಾಭ್ಯಾಸದ ಅರಿವು ಹಿನ್ನಲೆಯಲ್ಲಿದ್ದು ನಂತರ ಸೃಷ್ಟಿ ಬಂಡಾಯದ ರೂಪದಂತಿದ್ದು ಸ್ತ್ರೀವಾದ ಅರಿವು ಕಾರಣವಾಗಿದ್ದಿರಬಹುದು ಎಂದು ಹೇಳಬಹುದಾಗಿದೆ.

ಇಲ್ಲಿ ಪ್ರತಿರೋಧಕ ನೆಲೆಯಲ್ಲಿದ್ದು ಸಂವೇದನೆಗಳು ಮುಖ್ಯವಾಗಿ ಹೇಗೆ ಸಮಾಜವು ಸ್ತ್ರೀಯನ್ನು ದುರ್ಬಲ, ಬಲಹೀನ, ನಿಸ್ತೇಜಗೊಳಿಸಿವೆ, ಹೇಗೆ ಅಬಲೆ ಎಂದು ಗುರುತಿಸಿವೆ ಎಂದು ನೋಡುವ ಅಂಶಗಳಲ್ಲಿ, ವ್ಯವಸ್ಥೆಯ ಲೋಪಗಳು ಕಾರ್ಯ ಇವು ಎಲ್ಲಿಂದ ಹುಟ್ಟುತ್ತದೆ ಎಂಬುದರ ಅರಿವಿನ ಪ್ರಶ್ನೆ ತಲೆದೋರುತ್ತದೆ. ಇಲ್ಲಿ ಸ್ತ್ರೀವಾದ ಎಂದರೆ ಸಮಾನತೆ ಸಾಧಿಸುವುದು ಎಂದರ್ಥ ಅದು ಹೇಗೆ ಅಧಿಕಾರಗಳನ್ನು ಪುನಾರಚನೆ ಮಾಡುವುದರ ಮೂಲಕ ಅವನ್ನು ಸಾಧಿಸಬಹುದೇನೋ ಎಂಬ ಆಶಯ ಉಳ್ಳವರಾಗಿದ್ದುದನ್ನು ಗಮನಿಸಬಹುದಾಗಿದೆ. ಲೇಖಕಿಯ ಪ್ರಜ್ಞಾಪೂರ್ವಕ ಸಂವೇದನೆಗಳು ರೂಪುಗೊಂಡಂತೆಯೇ ಅವರ ತಮ್ಮ ಅಭಿವ್ಯಕ್ತಿಯ ರೂಪಕವಾಗಿ ಹಲವಾರು ಮಾರ್ಗಗಳನ್ನು ಅನುಸರಿಸುತ್ತಾ ಹೊರಟರು. ಪುರಾಣ ಪ್ರಸಿದ್ಧವಾದ ಸ್ತ್ರೀವ್ಯಕ್ತಿತ್ವಗಳನ್ನು ಮಾನವೀಯ ನೆಲೆಯಲ್ಲಿ ನೀಡುತ್ತಾ ಪ್ರಸ್ತುತತೆಗೆ ತಾಳೆ ನೋಡುವ ಮೂಲಕ ಪ್ರಯತ್ನ ನಡೆಯಿತು. ಸೀತೆ, ದ್ರೌಪದಿ, ದಮಯಂತಿ, ಮಾಧವಿ ಈ ಪಾತ್ರಗಳ ಪುನರ್ ಕಟ್ಟುವಿಕೆಯಲ್ಲಿ ಕಾಮದ ಪರಿಕಲ್ಪನೆಯು ಸಹ ನಮಗೆ ಸಮಾಜದಿಂದ ನಿರ್ದೇಶಿತವಾಗುತ್ತದೆಂಬುದನ್ನು ತಿಳಿಸುವುದರ ಜೊತೆಗೆ ಅಲ್ಲಿ ಸ್ತ್ರೀ–ಪುರುಷರಿಬ್ಬರಿಗೂ ಅದು ಸಹಜ ಗುಣುವಾಗಿದ್ದರೂ ಬೇರೆ–ಬೇರೆಯಾಗಿ ಒದಗುತ್ತದೆ ಎಂದಿದ್ದಾರೆ ಇದನ್ನು ಅನೇಕ ಬರಹಗಾರ್ತಿಯರು ಪ್ರತಿರೋಧದ ನೆಲೆಯಲ್ಲಿ ಗ್ರಹಿಸುವಿಕೆ ಗೋಚರಿಸುತ್ತದೆ.

ಉಷಾ – ಅವರ ಈ ನೆಲದ ಹಾಡು / ಕವಿತೆಯಲ್ಲಿ

ನನ್ನ ತಾಯೆಂದು, ಬಾಯೆಂದು

ಕೂಡ ಕರೆದು ಮೊಲೆಹಾಲ ಹೀರಿ ಬೆಳೆದ

ಕೃಷ್ಣ ಸಂತಾನವೇ – ಕಾಣಲಿಲ್ಲ ನಿಮಗೆ

ಮೊಲೆತೊಡೆಗಳ ಹೊರತಾಗಿ ಇನ್ನೊಂದು

ನಸುಗೆಂಪು ಆಸೆಗಳ ಹೊತ್ತ ಹೃದಯ ಉಂಟೆಂದು

ದೇಹವು ಪುರುಷನ ಆಕ್ರಮಣಕ್ಕೆ, ಭೋಗಕ್ಕೆ ತುತ್ತಾದಾಗ ಪ್ರತಿರೋಧಕವು ಆಕ್ರೋಶದ ನೆಲೆಯಲ್ಲಿ ವ್ಯಕ್ತವಾಗುವ ರೀತಿ ನೋಡಬಹುದಾಗಿದೆ.

ವಸುಮತಿ ಉಡುಪ ಅವರ 'ಖೆಡ್ಡಾ' ಕತೆಯಲ್ಲಿ ಹೆಣ್ಣು ಸ್ವಾವಲಂಬಿಯಾಗಿ ತಾನು ಯಾರ ಅಧೀನದಲ್ಲಿರಬಾರದೆಂದು ತನ್ನ ಕಾಲ ಮೇಲೆ ತಾನು ನಿಲ್ಲುವಂತಹ ಪ್ರಜ್ಞೆ ಅವಳದ್ದಾಗಿದೆ. ಈ ಸಮಾಜ ಗಂಡ ಸತ್ತ ಹೆಣ್ಣಿಗೆ ಹೇಗೆ ವೇಶ್ಯೆ ಎಂಬ ಪಟ್ಟ ಕಟ್ಟುತ್ತಾರೆ. ಹೇಗೆ ಅವಳಿಗೆ ದಿನೇ-ದಿನೇ ಲೈಂಗಿಕ ಅಪರಾಧವನ್ನು ಹೊರಿಸುತ್ತಾರೆ ಎಂಬುದು ಈ ಕತೆಯಲ್ಲಿ ವ್ಯಕ್ತವಾಗಿದೆ. ಮದುವೆಯಾಗಿ ತನ್ನ ಗಂಡನ ಮನೆಯಲ್ಲಿ ಎದುರಾಗುವ ಕಷ್ಟಗಳನ್ನು ಹೇಗೆ ನಿಭಾಯಿಸಿಕೊಂಡು ಹೋಗುವವಳು ಮತ್ತು ಅಣ್ಣ ಅತ್ತಿಗೆಯು ತನ್ನ ತಂಗಿಯನ್ನು ತಾಯಿಯಂತೆ ಪ್ರೀತಿ, ವಾತ್ಸಲ್ಯದಿಂದ ನೋಡಿಕೊಳ್ಳುವುದುದು ಕಂಡುಬರುತ್ತದೆ. ತಾನು ವಿಷ್ಣುವಿನ ಅಣ್ಣನ ಮನೆಯಲ್ಲಿ ತಿನ್ನಬೇಕು. ತಾನು ಏನಾದರೂ ಕೆಲಸ ಮಾಡುವುದಾಗಿ ನಿರ್ಧರಿಸಿದಾಗ ಅಣ್ಣ ಪ್ರೋತ್ಸಾಹಿಸುವುದು ಕಂಡುಬರುತ್ತದೆ. ಹೆಣ್ಣು ತಾನು ಗಂಡಿನಿಂದ ಪದೇ ಪದೇ ದೌರ್ಜನ್ಯಕ್ಕೆ ಒಳಗಾದರೆ ಅವಳಿಂದ ಸಹಿಸಲು ಆಕೆಯ ಮನಸ್ಸಿನಲ್ಲಿ ಗಂಡಿನ ವಿರುದ್ಧವೇ ತಿರಸ್ಕಾರದ ಮನೋಭಾವ ಮೂಡುತ್ತದೆ. ಆಗ ಆ ಹೆಣ್ಣನ್ನು ಸಮಾಜ ನೋಡುವ ನೋಟವೆ ಬದಲಾಗುತ್ತದೆ. ತಾನು ಶಿಕ್ಷಣವನ್ನು ಪಡೆದು ಉದ್ಯೋಗ ವ್ಯವಹಾರಗಳಲ್ಲಿ ತೊಡಗುತ್ತಾಳೆ.

ಜಾಗತಿಕ ವಿದ್ಯಮಾನಗಳು ಇಡೀ ಸಮಾಜವನ್ನು ಆಧುನೀಕೊತ್ತರದ ಮುಕ್ತವಾದ ಸಾಮಾಜಿಕ ವ್ಯವಸ್ಥೆಗೆ ತಳ್ಳುತ್ತಿರುತ್ತದೆ. ಹಾಗಾಗಿ ಸಂಪ್ರದಾಯಕ್ಕೆ ಶರಣಾಗುವುದು ಮತ್ತು ಆಧುನೀಕೊತ್ತರಕ್ಕೆ ಸಿಕ್ಕಿ ಒದ್ದಾಡುವ ಪರಿಸ್ಥಿತಿ ಹೆಣ್ಣಿಗೆ ಸಿಕ್ಕಿರುವ ಅಸ್ತಿತ್ವ ಎನಿಸಿದೆ. ಹಿಂದೆ ಮಹಿಳೆಯರು ಋತುಚಕ್ರದ ಸಂದರ್ಭದಲ್ಲಿ ಬೇರೆ ಗಂಡಸರಿಗೆ ಮುಖವನ್ನು ತೋರಿಸುವಂತಿರಲಿಲ್ಲ. ಅದಕ್ಕಾಗಿ ಮಹಿಳೆಯರಿಗೆ ಬೇರೆ ಜಾಗವನ್ನು ನಿಗದಿಪಡಿಸಲಾಗಿತ್ತು. ಇದರಿಂದಾಗಿ ಮಹಿಳೆಯರು ಮಾನಸಿಕವಾಗಿ, ದೈಹಿಕವಾಗಿ ಹಿಂಸೆಯನ್ನು ಅನುಭವಿಸುವಂತಾಯಿತು. ಸಮಾಜದಲ್ಲಿ ಹಿಂದಿನ ಸಂಸ್ಕೃತಿ ಬಹಳ ಕಟ್ಟುನಿಟ್ಟಾಗಿ ಪಾಲಿಸಬೇಕಾಗುವುದು. ಆದರೆ ಇತ್ತೀಚಿಗೆ ಇದು ಬದಲಾಗಿ ಕಾಲ ಕ್ರಮೇಣವಾಗಿ ಸುಧಾರಿಸಿಕೊಳ್ಳುತ್ತಾ ಬರುತ್ತಿದೆ.

ಪ್ರತಿಭಾ ನಂದಕುಮಾರ್, ಮಲ್ಲಿಕಾ ಘಂಟಿ, ಗೀತಾ ನಾಗಭೂಷಣ, ವೀಣಾ ಶಾಂತೇಶ್ವರ ಸಾಹಿತ್ಯದಲ್ಲಿ ಈ ರೀತಿಯ ಪ್ರತಿಭಟನೆಯ ಧ್ವನಿಗಳನ್ನು ಕಾಣಬಹುದಾಗಿದೆ. ಮೊದ ವೈದೇಹಿಯವರ ಕಥನಗಳನ್ನು ನಾವು ಕಾಣುವ ಸ್ತ್ರೀಪರ ವಿಶಿಷ್ಟತೆಗಳಿಂದಲೇ ಹತ್ತಿರವೆನಿಸುವ ರೀತಿಯಲ್ಲಿಯೇ ಪುರುಷ ಪ್ರಧಾನ ಸಮಾಜವನ್ನು ಎದುರಿಸುವಾಗ ತನ್ನತನವನ್ನು ಪೋಷಿಸಿ, ಕಾಪಾಡುವ ಹೆಣ್ಣುಗಳ ವೈದೇಹಿಯವರ ಕಥೆಗಳಿದ್ದಾವೆ ಎನ್ನಬಹುದು – ಅಜ್ಜಯನ – ಈಸಿಭೇರು ಎಂಬಲ್ಲಿ ಕಂಬದ ಹಿಂದಿನಿಂದ ನಿಂತು ನೋಡುವ ಕಣ್ಣುಗಳಿಗೆ ಕಾಣುವ ರೀತಿ ಅಧಿಕಾರ ಸ್ವರೂಪದ್ದಾಗಿ ಕಾಣುತ್ತದೆ. ಅವರ ಮೂಲಕ

ಅಧಿಕಾರ ಕೇಂದ್ರದ ಅರಿವನ್ನು ನಿರೂಪಿಸಲಾಗಿದೆ ಎಂದು ಹೇಳಬಹುದು. ಸಾರಾ ಅವರ ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು, ಚಂದ್ರಗಿರಿಯ ತೀರದಲ್ಲಿ ಎಂಬಿವು ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆಯ ಹೊಸ ಆಯಾಮಗಳನ್ನು ತೆರದು ತೋರಿಸಿದವು.

## ಉಪಸಂಹಾರ :

ಮಹಿಳಾ ಸಂವೇದನೆ ಎಂಬುದು ಕೇವಲ ಕಾಲಘಟ್ಟಗಳ ಅಡಿಯಲ್ಲಿ ಚರ್ಚಿಸುವ ಸಂಗತಿಯಾಗಿಲ್ಲ. ಏಕೆಂದರೆ ಪ್ರಸ್ತುತ 21ನೇ ಶತಮಾನದಲ್ಲಿಯೂ ಮಹಿಳಾ ಪರವಾದ ಸಂವೇದನೆ ಹಿಂದಿಗಿಂತಲು ಅಧಿಕವಾಗಿ ಸ್ತ್ರೀ–ಪುರುಷರಿಬ್ಬರಲ್ಲಿಯೂ ಮೂಡಿಬರಬೇಕಿದೆ. ಕಾರಣ ಇಂದಿಗೂ ಕೂಡ ಮಹಿಳೆಯರು ಧಾರ್ಮಿಕತೆಯ ಹೆಸರಿನಲ್ಲಿ ತಲಾಖ್, ಸಂಪ್ರದಾಯದ ಸಂದಿಗ್ಧತೆಯಲ್ಲಿ ಗೌಪ್ಯವಾಗಿರುವ ಮುಟ್ಟಿನ ಗುಟ್ಟು, ಲೈಂಗಿಕತೆಯ ಹೆಸರಿನಲ್ಲಿ ನಡೆಯುತ್ತಿರುವ ರಾಜಕಾರಣ ಮತ್ತು ಅವರ ಒಳತೋಟಿಗಳು, ಪಿತೃಪ್ರಭುತ್ವ, ಮುನ್ನೆಲೆಗೆ ಬಾರದಿರುವ ಅಸಂಖ್ಯಾತ ಅತ್ಯಾಚಾರ, ಕೌಟುಂಬಿಕ ಅಭದ್ರತೆ, ಶೋಷಣೆ, ದಬ್ಬಾಳಿಕೆಯ ಕರಿನೆರಳಿನಲ್ಲಿ ನರಳುತ್ತಿರುವುದು ಕಂಡುಬರುತ್ತದೆ. ಸಿಮಂದ ಬೊವಾ ಹೇಳುವಂತೆ "ಹೆಣ್ಣಾಗಿ ಯಾರು ಹುಟ್ಟುವುದಿಲ್ಲ ನಂತರ ರೂಪಿತವಾಗುತ್ತಾಳೆ" ಎಂಬಂತೆ ಹೆಣ್ಣನ್ನು ರೂಪಿಸುವ ವ್ಯವಸ್ಥಿತ ಪಿತೂರಿಗಳು ಇಂದಿಗೂ ನಡೆದಿವೆ. ಜೊತೆಗೆ ಬರೆದಿಟ್ಟ ಪುರಾಣ ಇತಿಹಾಸಗಳಲ್ಲಿನ ಮಾತನಾಡದ ಮಹಿಳೆಯರ ಶೋಷಿತ ಬದುಕನ್ನ ಪ್ರಸ್ತುತ ಸಮಾಜದೊಂದಿಗೆ ಪುನರ್ ರಚಿಸುವ ನಿಟ್ಟಿನಲ್ಲಿ ಇಂದಿನ ಮಹಿಳಾಪರ ಬರಹಗಾರರು ಕಾರ್ಯಪ್ರವೃತ್ತರಾಗಿದ್ದಾರೆ. "ಮಹಿಳೆಯ ಬದುಕಿನ ಹಲವು ಮುಖಗಳನ್ನು ಅನಾವರಣಗೊಳಿಸುವ ಮಹಿಳಾ ಸಾಹಿತ್ಯ, ಪ್ರಧಾನ ವ್ಯವಸ್ಥೆ ರೂಪಿಸಿದ್ದ ಬರವಣಿಗೆಯ ಪರಿಕರಗಳಿಂದ ಬಹುಬೇಗನೇ ಬಿಡುಗಡೆಗೊಂಡಿದೆ. ಬರವಣಿಗೆಯ ಪರಿಕರಗಳಲ್ಲಿ ಭಾಷಿಕ ಆಶಯ ಪ್ರಮುಖವಾಗಿದೆ. ಹಾಗಾಗಿ ಈ ದಶಕದ ಲೇಖಕಿಯರಲ್ಲಿ ತುಂಬಾ ಎಚ್ಚರದಿಂದಲೇ ಸಿದ್ಧ ಮಾದರಿಯ ಚೌಕಟ್ಟುಗಳಿಂದು ಬಿಡುಗಡೆ ಪಡೆಯಲು ತವಕಿಸುತ್ತಲೇ ಯಶಸ್ಸು ಸಾಧಿಸಿದ್ದಾರೆ" ಆ ಮೂಲಕ ಹೊಸ ತಲೆಮಾರಿನಲ್ಲಿ ಹೊಸ ಇತಿಹಾಸದೊಂದಿಗೆ ಮಹಿಳಾ ಸಂವೇದನೆಯು ಹೊಸ ರೂಪ ಪಡೆಯುವುದಕ್ಕೆ ಸಾಧ್ಯವಾಯಿತು.

ಮಹಿಳಾ ಸಂವೇದನೆ ಒಂದು ಸಾಮಾಜಿಕ ನೆಲೆಗಟ್ಟಿನಲ್ಲಿ ಕಾಣಬೇಕಾಗಿರುವುದು ಸರಿ ಎಂದು ಹೇಳಬಹುದು. ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಮಾನವೀಯ ನೆಲೆಗಟ್ಟಿನಲ್ಲಿ ಕಾಣುವ ಬದಲು ನಾಗರೀಕ ಸಮುದಾಯದ ಸಂಪ್ರದಾಯವನ್ನ ಸಾಂಸ್ಕೃತಿಕ ನೆಲೆಯಲ್ಲಿ ಕಾಣುವ ಪ್ರಯತ್ನವಾಗುತ್ತದೆ ಎನ್ನಬಹುದು ಅತ್ಯಾಚಾರಕ್ಕೊಳಗಾದ ಮಹಿಳೆಯರು ಸಂತಸ್ಥರಿಗದೆ ಅಪರಾಧಿಗಳಾಗಿಬಿಡುತ್ತಾರೆ "ಅವಳು ಹೀಗಿದ್ದಿದ್ದರೆ ಹೀಗೆ ಹೀಗೆಂದೂ ಆಗುತ್ತಿರಲಿಲ್ಲ" ಎನ್ನುವ ಹಳವಳಿಕೆ – " ತನ್ನ ಎಚ್ಚರಿಕೆಯಲ್ಲಿ ತಾನಿದ್ದಿದ್ದರೆ ಹೀಗಾಗುತ್ತಿರಲಿಲ್ಲ" ಎನ್ನುವ ಉದಾರದ, ಅನುಕಂಪದ ಮಾತುಗಳ ನಿರ್ಭಯ, ಸೌಜ್ಯನ ಮುಂತಾದವರ ಸುತ್ತ ಹರಿದಾಡುತ್ತಿರುವುದು ಗಮನಿಸುವ ಮತ್ತು ತಿಳಿದಿರುವ ಸಂಗತಿಯಾಗಿದೆ, ಆದರೆ ಇಲ್ಲಿ ಅಡಕವಾಗಿರುವ ಅಭಿವ್ಯಕ್ತದ ವಿಚಾರವನ್ನು ಅರಿಯಬೇಕಿದೆ ಎಂದು ಹೇಳಬಹುದು.

ಮಹಿಳೆ ತನ್ನ ಅಶಯಗಳನ್ನು ಹೊರಗೆಡಹಲು ಹೆಣಗಾಡಬೇಕಿದೆ. ತನ್ನ ಆದ್ಯತೆಗಳನ್ನು ಸಾಧಿಸಲು ಶ್ರಮಿಸಬೇಕಿದೆ. ಜೊತೆಗೆ ಸಮಾಜಮುಖಿಯಾಗಿ ಮಹಿಳೆಯೂ ಮತ್ತೊಬ್ಬ ಮಹಿಳೆಯ ಬಗ್ಗೆ ಪರಸ್ಪರ ಗೌರವ, ಆದರ ಇಟ್ಟಿಕೊಳ್ಳಬೇಕು ಮತ್ತು ಕೇವಲ ಬರಹಗಳಲ್ಲಿ ಈ ಹೋರಾಟಗಳು, ಸಂವೇದನೆಯ ಆಸ್ತಿತ್ವದ ಸವಾಲುಗಳು ಏಳುತ್ತವೆಯೇ ವಿನಃ ಅದನ್ನು ಕಾರ್ಯರೂಪಕ್ಕೆ ತರುವ ಸಂಗತಿಗಳು ಬಹಳಷ್ಟಿವೆ ಎಂಬುದನ್ನು ಈ ಮೂಲಕ ಗ್ರಹಿಸಬಹುದಾಗಿದೆ.

# ಪರಾಮರ್ಶನ ಗ್ರಂಥಗಳು


1. ಡಾ. ಸಾರಾ ಅಬೂಬಕರ ಅವರ ಸಮಗ್ರ ಕಥೆಗಳು. ಭಾಗ–2 ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ ಮುಖ್ಯಬೀದಿ, ಗುಲಬರ್ಗಾ. 2011 (ಪ್ರಥಮ ಆವೃತ್ತಿ)
2. ದಕ್ಷಿಣ ಕರ್ನಾಟಕದ ಜನಪದ ಕಥೆಗಳು, ಜೀ.ಶಂ.ಪರಮಶಿವಯ್ಯ (ಸಂ), ಸಾಹಿತ್ಯ ಅಕಾಡೆಮಿ, 2020 (2ನೇ ಆವೃತ್ತಿ).
3. ದ ಸೆಕೆಂಡ್ ಸೆಕ್ಸ್, ಸಿಮೊನ್ ದಿ ಬೋವಾ, ಕನ್ನಡ ಓದು ಡಾ. ಎಚ್. ಶ್ರೀಮತಿ, ಬರಹ ಪಬ್ಲಿಷಿಂಗ್ ಹೌಸ್ 2011, (ಪರಿಷ್ಕೃತ ಮೊದಲ ಆವೃತ್ತಿ).
4. ಮಹಿಳಾ ಅಧ್ಯಯನ : ಸಾಧ್ಯತೆಗಳು ಮತ್ತು ಸವಾಲುಗಳು, ಡಾ. ಕಿಶೋರಿ ನಾಯಕ್, ಮಹಿಳಾ ಅಧ್ಯಯನ ಕೇಂದ್ರ, ಮಂಗಳೂರು ವಿವಿ, 2007.
5. ಶಕ್ತಿಶಾರದೆಯ ಮೇಳ, ಡಿ. ಆರ್. ನಾಗರಾಜ್, ಅಕ್ಷರ ಪ್ರಕಾಶನ, 2015, (6ನೇ ಆವೃತ್ತಿ).
6. ಸಂದೇಹದ ಸುಳಿಯಲ್ಲಿ ಸಮಗ್ರ ಕಥೆಗಳು ಭಾಗ–3 ಚಂದ್ರಗಿರಿ ಪ್ರಕಾಶನ, ಸೂಕ್ಷ್ಮತರಂಗ ನಿಲಯ ರಸ್ತೆ, ಮಂಗಳೂರು. 2013.
7. ಸ್ತ್ರೀವಾದ ಪದವಿವರಣ ಕೋಶ, ಎಚ್.ಎಸ್.ಶ್ರೀಮತಿ, ಅಭಿನವ ಪ್ರಕಾಶನ 2018 (ಒಂದನೇ ಆವೃತ್ತಿ).
8. ಸ್ತ್ರೀವಾದ ಮತ್ತು ಲೈಂಗಿಕತಾವಾದ, ಎಚ್.ಎಸ್.ಶ್ರೀಮತಿ, ಅಹರ್ನಿಷಿ ಪ್ರಕಾಶನ 2019 (ಒಂದನೇ ಆವೃತ್ತಿ).